**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC**–583/2021

**ದಿನಾಂಕ 09-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಮಾನಪ್ಪ | RW1 |
| ತಂದೆಯ ಹೆಸರು | ಃ | ಮರೆಪ್ಪ ರಾಜಾಪೂರ | |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಲೀಗಲ್ ರಿಟೇನರ್, ICICI Lombard General Insurance Company | |
| ವಾಸಸ್ಥಳ | ಃ | ಬಿರಾಳ | |

**ಮುಖ್ಯ ವಿಚಾರಣೆಃ ಶ್ರೀ VCMP 2 ನೇ ಎದುರುದಾರರ ಪರ ವಕೀಲರಿಂದಃ**

ಮುಖ್ಯ ವಿಚಾರಣೆ ಬದಲಾಗಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ದ್ವಿಚಕ್ರ ವಾಹನ ನಂ MH-25 AR-9449 ವಾಹನಕ್ಕೆ ಭಾರತಿ ಎಕ್ಸಾ General Insurance Company ವತಿಯಿಂದ ವಿಮೆ ಪಾಲಿಸಿ ದಿನಾಂಕ 06-06-2020 ರಿಂದ 05-06-2025 ವರೆಗೆ ನೀಡಲಾಗಿತ್ತು. ಸದರಿ ಭಾರತಿ ಎಕ್ಸಾ General Insurance Company ಈಗ ICICI Lombard ನಮ್ಮ ಕಂಪನಿಯೊಂದಿಗೆ ವಿಲೀನಗೊಂಡಿದೆ.

ಯಡ್ರಾಮಿ ಪೊಲೀಸ್ ಠಾಣಾ ಗು.ನಂ.135/2020 ರ ಪ್ರಕರಣದಲ್ಲಿ ಪೊಲೀಸರು ಸಲ್ಲಿಸಿದ ಅಪರಾಧ ವಿವರ ನಮೂನೆಯ ಯಥಾ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್.1 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಶ್ರೀ SSPP ಅರ್ಜಿದಾರರ ಪರ ವಕೀಲರಿಂದ**

ಅಪಘಾತದ ಸಮಯದಲ್ಲಿ ವಾಹನ ನಂ.MH-25 AR-9449 ವಾಹನಕ್ಕೆ ಭಾರತಿ ಎಕ್ಸಾ General Insurance Company ವತಿಯಿಂದ ನೀಡಲಾದ ವಿಮೆ ಚಾಲ್ತಿಯಲ್ಲಿತ್ತು ಎಂದರೆ ನಿಜ. ಅಪಘಾತವು ಸದರಿ MH-25 AR-9449 ವಾಹನದ ಚಾಲಕನ ತಪ್ಪಿನಿಂದಾಗಿರುತ್ತದೆ ಎಂದು ಸದರಿ ವಾಹನದ ಮೇಲೆ ಪೊಲೀಸರು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದರೆ ನಿಜ. ಸಾಕ್ಷಿ

ಮುಂದುವರೆದು ಪೊಲೀಸರು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ.

ಅಪಘಾತವಾದ ನಂತರ ನಮ್ಮ ಕಂಪನಿ ವತಿಯಿಂದ ನಾವು ತನಿಖೆ ಮಾಡಿಸಿರುತ್ತೇವೆ ಆದರೆ ಸದರಿ ತನಿಖೆ ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ ಅಂತಾ ಹೇಳುತ್ತಿದ್ದು ನಾವಾಗಲೀ ವಾಹನದ ಮಾಲೀಕರಾಗಲೀ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ಹೇಳಿ ಸದರಿ ದೋಷಾರೋಪಣೆ ಪಟ್ಟಿಯನ್ನು ರದ್ದುಗೊಳಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನಾವು ದೋಷಾರೋಪಣೆ ಪಟ್ಟಿಗೆ ಪಕ್ಷಗಾರರಾಗಿಲ್ಲ ಆದ್ದರಿಂದ ನಾವು ಆ ರೀತಿ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕಂಪನಿ ಪರಿಹಾರ ಧನ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಶಾನೆ ಆರ್–1ರ ಕಚ್ಚಾ ನಕಾಶೆಯ ಪ್ರಕಾರ ಅಪಘಾತ ರಸ್ತೆ ಮಧ್ಯದಲ್ಲಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತವು 07–12–2020 ರಂದು ಆಗಿದ್ದು ಹಾಗೂ ಪಂಚನಾಮೆಯನ್ನು 08–02–2020 ರಂದು ಮಾಡಲಾಗಿದ್ದ ಕಾರಣ ಸದರಿ ಪಂಚನಾಮೆಯಲ್ಲಿ ತೋರಿಸಲಾದ ಅಪಘಾತದ ಸ್ಥಳ ತಪ್ಪಾಗಿ ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಶಾನೆ ಆರ್–1 ರ ಪ್ರಕಾರ ಅಪಘಾತವಾದ ಸ್ಥಳದ ರಸ್ತೆ ತಿರುವಿನಿಂದ ಕೂಡಿದೆ ಎಂದರೆ ನಿಜ. ಅಪಘಾತದ ಸಮಯದಲ್ಲಿ ಮೃತ ಶಿವರಾಯ ವಾಹನವನ್ನು ರಸ್ತೆಯ ಎಡಬದಿಯಲ್ಲಿಯೇ ಚಾಲನೆ ಮಾಡಿಕೊಂಡು ಹೋಗುತ್ತಿದ್ದರೂ ಸಹ ಪರಿಹಾರ ಧನ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಪಘಾತವು ರಸ್ತೆ ಮಧ್ಯದಲ್ಲಿ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಶಾನೆ ಆರ್–1ರ ದಾಖಲೆಗಳು ವಾಹನಗಳು ಎಲ್ಲಿ ಬಿದ್ದಿದ್ದವು ಎಂದು ನಮೂದಿಸಿಲ್ಲ ಎಂದರೆ ನಿಜ. ನಿಶಾನೆ ಆರ್–1 ರ ದಾಖಲೆ ಕೂಡ ಅಪಘಾತವು ವಾಹನ ನಂ.MH–25 AR–9449 ರ ವಾಹದಿಂದ ಆಗಿದೆ ಅಂತಾ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಪರಿಹಾರ ಧನ ಕೊಡುವ ನಮ್ಮ ಕಂಪನಿ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಕಂಪನಿಯ ಹಿರಿಯ ಅಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರ ಹಾಗೂ 1 ನೇ ಎದುರುದಾರರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು ,ಜೇವರ್ಗಿ